**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 30.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಸ್ ಆರ್ ಸಿ ವಕೀಲರಿಂದಃ**

ನಾನು ಎಂಬಿಎ ಪದವಿಧರನಾಗಿದ್ದೇನೆ. ನಾನು ಶೇತ್ಕಿ ಕೆಲಸ ಮಾಡುತ್ತೇನೆ. ಪ್ರತಿವಾದಿ ನಂ.1 ಇವರು 2022 ರಲ್ಲಿ ಅವರು ಜಮೀನನ್ನು ಮಾರಾಟ ಮಾಡಲು ಇಟ್ಟಾಗಿಂದ ನನಗೆ ಪರಿಚಯವಿರುತ್ತಾರೆ. ನಾನು ಪ್ರತಿವರ್ಷ ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ನಾನು ಎಂಬಿಎ ಪದವಿಧರನಾಗಿದ್ದರಿಂದ ಆದಾಯ ತೆರಿಗೆ ಬಗ್ಗೆ ಇರುವ ಕಾನೂನು ನನಗೆ ಗೊತ್ತು ಎಂದರೆ ಸರಿ. ನಾನು ಇದುವರೆಗೂ ಆದಾಯ ತೆರಿಗೆಯ ಕಾಯ್ದೆ ಉಲ್ಲಂಘನೆ ಮಾಡಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ಆದಾಯ ತೆರಿಗೆ ಕಾಯ್ದೆ ಪ್ರಕಾರ 20 ಸಾವಿರಕ್ಕಿಂತ ಹೆಚ್ಚು ವ್ಯವಹಾರ ಮಾಡಿದ್ದಲ್ಲಿ ಅದನ್ನು ಆದಾಯ ತೆರಿಗೆ ವಿವರಗಳಲ್ಲಿ ತೋರಿಸಬೇಕು ಎಂದರೆ ಸರಿ. ಜೂನ್ ಅಥವಾ ಜುಲೈ 2022 ರಿಂದ ಪ್ರತಿವಾದಿ ನಂ.1 ನನಗೆ ಪರಿಚಯವಾದರು. ಬ್ರೋಕರ್ ಪ್ರತಿವಾದಿ ನಂ.1 ಇವರ ಆಸ್ತಿ ಮಾರಾಟಕ್ಕಿದೆ ಎಂದು ಹೇಳಿದ ನಂತರ ಅವರು ನನಗೆ ಪರಿಚಯವಾದರು. ಸದರಿ ಬ್ರೋಕರ್ ಹೆಸರು ರವಿಕುಮಾರ. ಅವರ ಅಡ್ಡಹೆಸರು ನನಗೆ ಗೊತ್ತಿಲ್ಲ. ನನ್ನ ಪ್ರಕಾರ ಸದರಿ ಬ್ರೋಕರ್ ರವಿಕುಮಾರ ಇವರಿಂದ ದಾವಾ ಆಸ್ತಿ ಮಾರಾಟಕ್ಕಿದೆ ಎಂದು ನನಗೆ ತಿಳಿದುಬಂತು.

2. ಖರೀದಿ ಕರಾರುಪತ್ರದಲ್ಲಿ ಇರುವ ಮೊತ್ತ್ವನ್ನು ಹೊರತುಪಡಿಸಿ ನಾನು ಬೇರೆ ಮೊತ್ತವನ್ನು ಪ್ರತಿವಾದಿ ನಂ.1 ಇವರಿಗೆ ನೀಡಿರುವುದಿಲ್ಲ. ನಿಮ್ಮ ಪ್ರಕಾರ ಅಗಸ್ಟ 2022 ರಲ್ಲಿ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ಎಷ್ಟಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ತಿಂಗಳಿನಲ್ಲಿ ದಾವಾ ಆಸ್ತಿಯ ಸರ್ಕಾರಿ ಬೆಲೆ ಎಷ್ಟಿತ್ತು ಎಂದು ಸಹ ನನಗೆ ಗೊತ್ತಿಲ್ಲ. ವಾದಪತ್ರದ ಪ್ಯಾರಾ ನಂ.4 ತೋರಿಸಿರುವ 8,15,000/- ಅವರು ಯಾವಾಗ ಪಡೆದುಕೊಂಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಬ್ರೋಕರ್ ರವಿಕುಮಾರ ಇವರ ಸಾಕ್ಷಿಯನ್ನು ಈ ದಾವೆಯಲ್ಲಿ ಮಾಡಿಸುತ್ತಿರಾ ಎಂದರೆ ಸಾಕ್ಷಿ ಅವರನ್ನು ನನಗೆ ಯಾರು ಪರಿಚಯ ಮಾಡಿಕೊಟ್ಟಿದ್ದರು ಅವರಿಗೆ ಕೇಳಿ ನೋಡುತ್ತೇನೆ ಎಂದು ನುಡಿಯುತ್ತಾರೆ. ಬ್ರೋಕರ್ ರವಿಕುಮಾರರವರನ್ನು ನಿಮಗೆ ಯಾರು ಪರಿಚಯ ಮಾಡಿಕೊಟ್ಟರು ಎಂದರೆ ಸಾಕ್ಷಿ ಅವರೇ ಬಂದು ಜಮೀನು ಮಾರಾಟಕ್ಕಿದೆ ಎಂದು ಹೇಳಿದರು.

ರವಿಕುಮಾರು ಇವರು ಪ್ರತಿವಾದಿ ನಂ.1 ಇವರನ್ನು ನನಗೆ ಪರಿಚಯ ಮಾಡಿಕೊಟ್ಟರು ಎಂದು ನಾನು ಈಗ ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರವಿಕುಮಾರ ಬ್ರೋಕರ್ ಎಂಬ ವ್ಯಕ್ತಿ ಅಸ್ಥಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ರವಿಕುಮಾರ ಬ್ರೋಕರ್ ಲೊಕೇಶನ್ ಎಲ್ಲಿ ಹಾಕಿದ್ದರು ಎಂದರೆ ಸಾಕ್ಷಿ ಅವರು ಲೊಕೇಶನ್ ಎಲ್ಲಿದೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

2. ಪ್ರತಿವಾದಿ ನಂ.1 ಇವರ ಜೊತೆ ನಿಮಗೆ ಸ್ವಂತ ಮಾತನಾಡುವ ಪ್ರಸಂಗ ಯಾವಾಗಲಾದರೂ ಬಂದಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ನೀಡಿದ ನೋಟೀಸಿಗೆ ಪ್ರತಿವಾದಿ ನಂ.1 ಪ್ರತ್ಯುತ್ತರ ನೀಡಿಲ್ಲ. ಪ್ರತಿವಾದಿ ನಂ.1 ನನಗೆ ಪ್ರತ್ಯುತ್ತರ ನೀಡಿ ಅದರಲ್ಲಿ ನನ್ನಿಂದ ಪಡೆದ ಸಾಲದ ಭದ್ರತೆಗಾಗಿ ತೋರಿಕೆಗೆ ಮಾತ್ರ ಖರೀದಿ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಹಾಗೂ ಅವರು ಬಡ್ಡಿಯನ್ನು ಸಹ ನನಗೆ ಹಿಂದಿರುಗಿಸಿರುತ್ತಾರೆಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**